ಈಗಲೂ ನೆನಪಿಸಿಕೊಳ್ಳುತ್ತಾರೆ. ವಿಲಿಯಮ್ ಶೇಕ್ಸ್‌ಪಿಯರ್ ಎಂಬ ವಿದ್ವತ್ಪೂರ್ಣ ಕೃತಿಯನ್ನು ಎಲ್.ಎಸ್.ಎಸ್. 1986ರಲ್ಲಿಯೇ ರಚಿಸಿದ್ದರು. ಶೇಕ್ಸ್‌ಪಿಯರ್ ಪ್ರೇಮಿಗಳಿಗೆ ಅತ್ಯಂತ ಉಪಯುಕ್ತವಾದ ಈ ಕೃತಿಯಲ್ಲಿ ಅವರು ಶೇಕ್ಸ್‌ಪಿಯರ್ ನಾಟಕಗಳನ್ನಷ್ಟೇ ಅಲ್ಲದೆ ಅಂದಿನ ಕಾಲದ (ಎಂದರೆ 16ನೆಯ ಶತಮಾನದ) ಬ್ರಿಟಿಷ್ ರಂಗಮಂದಿರ, ಹುಡುಗರೇ ಸ್ತ್ರೀಪಾತ್ರಗಳನ್ನು ಅಭಿನಯಿಸುತ್ತಿದ್ದುದು, ಅಂದಿನ ಕಾಲದ ಪ್ರೇಕ್ಷಕರಿಗೆ ಅವಶ್ಯಕವಾಗಿದ್ದ ಹೊಡೆದಾಟ, ಲೈಂಗಿಕತೆಯ ಲೇಪವಿದ್ದ ಹಾಸ್ಯ, ವಿದೂಷಕರು, ಇತ್ಯಾದಿ ಎಲ್ಲವನ್ನೂ ಶೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಜೋಡಿಸಿದುದು, ಇತ್ಯಾದಿ ನಾಟಕಕಾರ–ರಂಗಮಂದಿರ–ಪ್ರೇಕ್ಷಕವೃಂದ ಇವೆಲ್ಲವನ್ನೂ ಎಲ್.ಎಸ್. ಎಸ್. ಈ ಕೃತಿಯಲ್ಲಿ ವಿವರಿಸುತ್ತಾರೆ.

2017ರಲ್ಲಿ ಪ್ರಕಟವಾದ ಶೇಕ್ಸ್‌ಪಿಯರ್‌ನ ಸಮಗ್ರ ನಾಟಕ ಕಥೆಗಳು ಕೃತಿ ಆ ನಾಟಕಕಾರನ 33 ನಾಟಕಗಳ ಕಥೆಗಳನ್ನು ನಿರೂಪಿಸುತ್ತದೆ; ಆದರೆ, ಈ ಕೃತಿಯಲ್ಲಿ ಕೇವಲ ನಾಟಕ–ಕಥೆಗಳಿಲ್ಲ. ಬದಲಿಗೆ, ಪ್ರಾರಂಭದಲ್ಲಿ ಪ್ರತಿಯೊಂದು ನಾಟಕದ ಸ್ವರೂಪದ ಬಗ್ಗೆ (ವೈನೋದಿಕ/ ರೊಮ್ಯಾಂಟಿಕ್/ ಕಾಮೆಡಿ/ ಡಾರ್ಕ್ ಕಾಮೆಡಿ/ ದುರಂತ/ ಇತ್ಯಾದಿ) ಕಿರು ಟಿಪ್ಪಣಿ, ನಂತರ ನಾಟಕದ ಸ್ಥೂಲ ಕಥೆ, ಕೊನೆಯಲ್ಲಿ ಅನೇಕ ಒಳನೋಟಗಳನ್ನೊಳಗೊಂಡ ಟಿಪ್ಪಣಿಗಳು – ಈ ರೀತಿ ಈ ಕೃತಿ ಮುಂದುವರೆಯುತ್ತದೆ. ಈ ಅಂಶವನ್ನು ಸ್ಪಷ್ಟಪಡಿಸಲು ಒಂದೆರಡು ಉದಾಹರಣೆಗಳನ್ನು ನೋಡಬಹುದು.

ಅ) ಟೇಮಿಂಗ್ ಆಫ್ ದ ಶ್ರೂ: ಪ್ರಾರಂಭದಲ್ಲಿ ಈ ನಾಟಕದ ಕಥೆಯ ಮೂಲ ಹಾಗೂ ಸಂಕ್ಷಿಪ್ತ ಪರಿಚಯವನ್ನು ಕೊಟ್ಟು, ಅನಂತರ ಈ ನಾಟಕದ ಜನಪ್ರಿಯತೆಯ ಕಾರಣವನ್ನು ಎಲ್.ಎಸ್.ಎಸ್. ವಿಶ್ಲೇಷಿಸುತ್ತಾರೆ. (ಈ ನಾಟಕದ ಕಥೆಯು ಎಷ್ಟು ಜನಪ್ರಿಯವೆಂದರೆ, ಕನ್ನಡದಲ್ಲಿಯೇ 'ಚಂಡೀ ಮದ ಮರ್ದನ', 'ಬಹದ್ದೂರ್ ಗಂಡ', ಇತ್ಯಾದಿ ಐದು ರೂಪಾಂತರಗಳಿವೆ; ಮತ್ತು ಒಂದು ಅತ್ಯಂತ ಜನಪ್ರಿಯವಾದ ಚಲನಚಿತ್ರವೂ ಇದೆ). ಈ ನಾಟಕದ ಜನಪ್ರಿಯತೆಗೆ ಕಾರಣ ಅದು ಪುರುಷಕೇಂದ್ರಿತ ವ್ಯವಸ್ಥೆಯನ್ನು ಅನುಮೋದಿಸುತ್ತದೆ ಮತ್ತು ಪ್ರೇಕ್ಷಕರು (ಹಾಗೂ ಓದುಗರು) ಆ ನಾಟಕದ ಘಟನೆಗಳಿಂದ ಒಂದು ಬಗೆಯ 'ಪರಾರ್ಥಕ ಆನಂದ'ವನ್ನು (vicarious pleasure) ಪಡೆಯುತ್ತಾರೆ ಎಂದು ತಮ್ಮ ಟಿಪ್ಪಣಿಯಲ್ಲಿ ಎಲ್.ಎಸ್.ಎಸ್. ಮಂಡಿಸುತ್ತಾರೆ. ನಾಟಕವು ಪುರುಷಕೇಂದ್ರಿತ ವ್ಯವಸ್ಥೆಯನ್ನು ಎಷ್ಟು ಪ್ರಬಲವಾಗಿ ಸಮರ್ಥಿಸುತ್ತದೆ ಎಂಬುದು ಅದರ ಹೆಸರಿನಲ್ಲಿಯೇ ಇದೆ ಎಂದು ವಾದಿಸುತ್ತಾ ಎಲ್.ಎಸ್.ಎಸ್. ಹೆಣ್ಣನ್ನು "ಪಳಗಿಸುವ ಚಿತ್ರಣದಲ್ಲಿಯೇ ಕ್ರೌರ್ಯವಿದೆ; 'ಪಳಗಿಸಲು' ಹೆಣ್ಣು ಒಂದು ಪ್ರಾಣಿಯೇ?" ಎಂದು ಪ್ರಶ್ನಿಸುತ್ತಾರೆ.

ಆ) ದ ಮರ್ಚಂಟ್ ಆಫ್ ವೆನಿಸ್: ಎಲ್.ಎಸ್.ಎಸ್. ಅವರ ದೃಷ್ಟಿಯಲ್ಲಿ ಈ ನಾಟಕದಲ್ಲಿ ಬರುವ ಯಹೂದಿ ಶೈಲಾಕ್ ಪಾತ್ರ ತುಂಬಾ ಸಂಕೀರ್ಣವಾದುದು ಮತ್ತು ಕೊನೆಗೆ ಶೈಲಾಕ್ ಟ್ರ್ಯಾಜಿಕ್ ಎತ್ತರಕ್ಕೇರುತ್ತಾನೆ. ಅವರಿಗೆ ಪೋರ್ಶಿಯಾ ಪಾತ್ರದ ಬಗ್ಗೆ ಅಷ್ಟೇನೂ ಮೆಚ್ಚುಗೆಯಿಲ್ಲ. ದಯೆ, ಅನುಕಂಪ ಇವುಗಳ ಬಗ್ಗೆಯೇ ಮಾತನಾಡುತ್ತಾ ಪೋರ್ಶಿಯಾ ತನ್ನ ಚತುರ ಬಲೆಯಲ್ಲಿ ಶೈಲಾಕ್‌ನನ್ನು ಬೀಳಿಸುತ್ತಾಳೆ ಎಂದು ಎಲ್.ಎಸ್.ಎಸ್. ಅಭಿಪ್ರಾಯ ಪಡುತ್ತಾರೆ. ಹಾಗೆಯೇ, ಅವರ ದೃಷ್ಟಿಯಲ್ಲಿ ಕೊನೆಯಲ್ಲಿ ಜಜ್ ಶೈಲಾಕ್‌ನಿಗೆ ವಿಧಿಸುವ ಶಿಕ್ಷೆಯೂ ನ್ಯಾಯಯುತವಾದುದಲ್ಲ; ಅವನ ಎಲ್ಲಾ ಆಸ್ತಿಯ ಅರ್ಧ ಪಾಲು ಮಗಳು ಜೆಸಿಕಾಗೆ ಹೋಗಿ ಇನ್ನರ್ಧ ಪಾಲನ್ನು ಸರಕಾರವು ವಶಪಡಿಸಿಕೊಂಡ ಮೇಲೆ ಶೈಲಾಕ್ ಬದುಕುವುದು ಹೇಗೆ? ಭಿಕ್ಷೆ ಬೇಡಬೇಕಾಗುತ್ತದೆ, ಅಷ್ಟೇ. ಆದರೂ ಜಜ್ ಅಷ್ಟಕ್ಕೇ ನಿಲ್ಲಿಸದೆ ಅವನಿಗೆ ಮತಾಂತರದ ಶಿಕ್ಷೆಯನ್ನೂ ಕೊಡುವುದನ್ನು ಒಪ್ಪಲಾಗುವುದಿಲ್ಲ. ಇಲ್ಲಾ ಅವನ ಎಲ್ಲಾ ಆಸ್ತಿಯನ್ನೂ ಅವನೇ ಉಳಿಸಿಕೊಂಡಿದ್ದು ಮತಾಂತರವಾಗಬೇಕು ಎಂದರೆ ಸರಿ, ಅಥವಾ ಅವನು ಮತಾಂತರಕ್ಕೆ ಒಪ್ಪದೇ ಹೋದರೆ ಅವನ ಎಲ್ಲಾ ಆಸ್ತಿಯನ್ನೂ ಮುಟ್ಟುಗೋಲು